## ಕ್ಲಬ್ ರಚಿಸುವ ವಿಧಾನ / ಕರ್ತವ್ಯಗಳು

1. ಪ್ರಾರಂಭದಲ್ಲಿ ಶಾಲಾ ಮತ್ತು ಸಮುದಾಯ ಮಟ್ಟದಲ್ಲಿ ಹಲವಾರು ಅರಿವಿನ ಕಾರ್ಯಕ್ರಮ ನಡೆಸಿ ಮಕ್ಕಳ, ಸಮುದಾಯದ ಒಪ್ಪಿಗೆ ಪಡೆದು ಕ್ಲಬ್‌ನ ಅಗತ್ಯ, ಉಪಯೋಗವನ್ನು ಅರ್ಥ ಮಾಡಿಕೊಂಡು ಕ್ಲಬ್‌ನ ರಚನೆಗೆ ಮುಂದಾಗುವುದು.
2. ಎಲ್ಲಾ ಮಕ್ಕಳು, ಸಭೆ ಸೇರಿ ಕ್ಲಬ್ ರಚಿಸುವುದು.
3. ಸದಸ್ಯರುಗಳು : ಪ್ರತಿ ಶಾಲೆಯ, ಪ್ರತಿ ತರಗತಿಯಿಂದ ಒಬ್ಬ ವಿದ್ಯಾರ್ಥಿ / ವಿದ್ಯಾರ್ಥಿನಿಯ ಆಯ್ಕೆ ಒಟ್ಟು 20 ವಿದ್ಯಾರ್ಥಿಗಳು ಸದಸ್ಯರಾಗಿರುತ್ತಾರೆ. (ಇತರೆ ಆಸಕ್ತ ವಿದ್ಯಾರ್ಥಿಗಳನ್ನು ಆರಿಸಬಹುದು.) ಮೂವರು ಶಿಕ್ಷಕರು (ಮುಖ್ಯೋಪಾಧ್ಯಾಯರು ಮತ್ತು 2 ಶಿಕ್ಷಕರು) - 3 ಎಸ್.ಡಿ.ಎಂ.ಸಿ. ಸದಸ್ಯರು (ಅಧ್ಯಕ್ಷರು ಮತ್ತು 2 ಸದಸ್ಯರು), 3 ಇತರೆ ಪೋಷಕರು. ಒಟ್ಟು 25 ರಿಂದ 30 ರ ವರೆಗೆ ಈ ಕ್ಲಬ್‌ನಲ್ಲಿ ಸದಸ್ಯರನ್ನು ಮಕ್ಕಳ ಮುಖಾಂತರ ಆಯ್ಕೆ ಮಾಡಬೇಕು.
4. 20 ಮಕ್ಕಳ ಸದಸ್ಯರಲ್ಲಿ 4 ಮಕ್ಕಳನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಬೇಕು (ಮಕ್ಕಳೇ).
5. ಶಿಕ್ಷಕರು, ಎಸ್.ಡಿ.ಎಂ.ಸಿ. ಸದಸ್ಯರು ಮತ್ತು ಪೋಷಕರು ಪ್ರೋತ್ಸಾಹಕ ಸದಸ್ಯರಾಗಿ ಮಾತ್ರ ಇರುತ್ತಾರೆ. ಎಲ್ಲಾ ಸಭೆ ಮಕ್ಕಳೇ ನಡೆಸುತ್ತಾರೆ.
6. ನಡವಳಿಕೆ ಪುಸ್ತಕ ಮುಖ್ಯೋಪಾಧ್ಯಾಯರ ಕಛೇರಿಯಲ್ಲಿ ಇಡುವುದು.
7. ಪ್ರತಿ ಸಭೆಯ ನಡವಳಿಕೆಯನ್ನು ಮಕ್ಕಳೇ ಬರೆಯುತ್ತಾರೆ. ಎಲ್ಲಾ ಸದಸ್ಯರು ಸಹಿ ಮಾಡುತ್ತಾರೆ.





8. ವರ್ಷಕ್ಕೆ 3 ಸಾಮಾನ್ಯ ಸಭೆ ನಡೆಸಬೇಕು. ಅದರಲ್ಲೂ ಎಲ್ಲಾ ಮಕ್ಕಳು, ಶಿಕ್ಷಕರು, ಪೋಷಕರು, ಎಸ್.ಡಿ.ಎಂ.ಸಿ. ಸದಸ್ಯರು ಭಾಗವಹಿಸುವರು. ಸಭೆಯಲ್ಲಿ ವರದಿ ಮಂಡನೆ, ಮುಂದಿನ ಯೋಜನೆ ತಯಾರಿಸುವುದು.
9. ಕ್ಲಬ್‌ನ ಸಮಿತಿ ಸದಸ್ಯರು ಪ್ರತಿ ತಿಂಗಳು ಸಭೆ ಸೇರಿ ಪ್ರತಿ ತಿಂಗಳ ಕಾರ್ಯಕ್ರಮದ ಚರ್ಚೆ ಮತ್ತು ಮುಂದಿನ ತಿಂಗಳ ಯೋಜನೆ ತಯಾರಿಸಿ, ಕಾರ್ಯಕ್ರಮ ನಡೆಸಬೇಕು.
10. ಪ್ರತಿ ತಿಂಗಳು 'ಕ್ಲಬ್'ನ ಮುಖಾಂತರ ಒಂದು ಕಾರ್ಯಕ್ರಮ ಹಮ್ಮಿಕೊಳ್ಳುವುದು.
11. ಶಾಲಾ ವ್ಯಾಪ್ತಿಯಲ್ಲಿ "ಶಾಲೆಗೊಂದು ಮಕ್ಕಳ ಹಕ್ಕುಗಳ ಕ್ಲಬ್"ನ ಪರಿಕಲ್ಪನೆ ಅಡಿಯಲ್ಲಿ ಪ್ರತಿ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ರಚಿಸಲು ದಿನಾಂಕ 23-05-2009ರ ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರ ನಿರ್ದೇಶನದಂತೆ ಹಾಗೂ ದಿನಾಂಕ 15-11-2010 ರಂದು ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೈಗೊಂಡ ತೀರ್ಮಾನದ ಪ್ರಕಾರ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ನಿರ್ದೇಶನದಂತೆ ಜಾರಿಗೆ ತರಲಾಗುತ್ತಿದೆ.
12. ಕ್ಲಬ್ ರಚನೆ ಮತ್ತು ಸಂಯೋಜನೆಗೆ ಸಹಕರಿಸಲು ಸರ್ವಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಸಂಪನ್ಮೂಲ ಕೇಂದ್ರ ಹಾಗೂ ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆಯ ಸಹಕಾರ ಪಡೆಯಬಹುದಾಗಿದೆ.

## ಭಾರತದ ಸಂವಿಧಾನದ ಪ್ರಕಾರ ಮತ್ತು ಮೂಲಭೂತವಾಗಿ ಮಕ್ಕಳ ಹಕ್ಕುಗಳು

| | | |
|---|---|---|
| **ಪ್ರೀತಿ, ವಾತ್ಸಲ್ಯ** | **ಭಾಗವಹಿಸುವುದು** | **ಶಿಕ್ಷಣ, ಸ್ನೇಹ** |
| **ಬಾಲ್ಯ, ವಿಶ್ವಾಸ** | **ಅಭಿಪ್ರಾಯ** | **ಮನರಂಜನೆ** |
| **ಪೋಷಣೆ** | **ಮೆಚ್ಚುಗೆ, ರಕ್ಷಣೆ** | **ವಸತಿ, ಆರೋಗ್ಯ** |
| **ಆಟ-ಪಾಠ** | **ಪೌಷ್ಠಿಕ ಆಹಾರ** | **ಅವಕಾಶ, ಸಂತೋಷ** |

1989ರ ನವೆಂಬರ್ 20 ರಂದು "**ಮಕ್ಕಳ ಹಕ್ಕುಗಳ ಒಡಂಬಡಿಕೆ**"ಯನ್ನು ವಿಶ್ವಸಂಸ್ಥೆ ಅಂಗೀಕರಿಸಿ ಅನುಷ್ಠಾನಕ್ಕೆ ತಂದಿದೆ. ಭಾರತ ಸರ್ಕಾರ 1992 ಡಿಸೆಂಬರ್ 11 ರಂದು ಅದಕ್ಕೆ ಒಪ್ಪಿ ಸಹಿಹಾಕಿ ಅನುಮೋದಿಸಿದೆ. ಜಗತ್ತಿನ 196 ರಾಷ್ಟ್ರಗಳು ಮಕ್ಕಳ ಹಕ್ಕುಗಳ ಈ ಒಡಂಬಡಿಕೆಗೆ ಈಗಾಗಲೇ ಒಪ್ಪಿ ಸಹಿ ಹಾಕಿ ಅನುಷ್ಠಾನಕ್ಕೆ ತರುತ್ತಿವೆ. ಈ ಒಡಂಬಡಿಕೆಯಲ್ಲಿ ಒಟ್ಟು 54 ಪರಿಚ್ಛೇದಗಳಿವೆ. ಒಡಂಬಡಿಕೆಯ ಮೊದಲನೇ ಭಾಗದ 41 ಪರಿಚ್ಛೇದಗಳಲ್ಲಿ ಮುಖ್ಯವಾಗಿ 4 ಹಕ್ಕುಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ 1. ಬದುಕುವ ಹಕ್ಕು 2. ರಕ್ಷಣೆಯ ಹಕ್ಕು 3. ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು 4. ಭಾಗವಹಿಸುವ ಹಕ್ಕು.

**ಜಿಲ್ಲಾಧಿಕಾರಿಗಳು / ಅಧ್ಯಕ್ಷರು**
ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ,
ರಾಯಚೂರು.

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,**
ಜಿಲ್ಲಾ ಪಂಚಾಯತ್,
ರಾಯಚೂರು.

**ಉಪ ನಿರ್ದೇಶಕರು**
ಸಾರ್ವಜನಿಕ ಶಿಕ್ಷಣ ಇಲಾಖೆ, ರಾಯಚೂರು.

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ

**ಸಂಯೋಜನೆ :** ಜಿಲ್ಲಾಡಳಿತ (229011), ಜಿಲ್ಲಾ ಪಂಚಾಯತ್ (228448), ಪೊಲೀಸ್ ಇಲಾಖೆ (235001), ಸಾರ್ವಜನಿಕ ಶಿಕ್ಷಣ ಇಲಾಖೆ (226162), ಕ್ಷೇತ್ರ ಶಿಕ್ಷಣಾಧಿಕಾರಿಗಳು (230075), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (226292), ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ (227581), ಡಯಟ್ (251391), ಸರ್ವ ಶಿಕ್ಷಣ ಅಭಿಯಾನ (227124), ಕಾರ್ಮಿಕ ಇಲಾಖೆ (226368) ಹಾಗೂ ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು (08532-230610).

# ಮಕ್ಕಳ ಹಕ್ಕುಗಳ ಕ್ಲಬ್




"ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ಮಕ್ಕಳೇ ರಚಿಸಿ, ನಡೆಸುವ ಮಕ್ಕಳ ಸಮಿತಿಯೇ

**"ಮಕ್ಕಳ ಹಕ್ಕುಗಳ ಕ್ಲಬ್"**

ಕರ್ನಾಟಕ ಸರ್ಕಾರ · ಕರ್ನಾಟಕ ರಾಜ್ಯ ಪೊಲೀಸ್ · ದುಡಿಮೆ ಬೇಡ ಶಿಕ್ಷಣ ಬೇಕು · unicef

**ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ 2009 (ಆಗಸ್ಟ್ 26, 2009) ರ ಪ್ರಕಾರ 6-14 ವರ್ಷದೊಳಗಿನ ಎಲ್ಲಾ ಮಕ್ಕಳು ಕಡ್ಡಾಯವಾಗಿ, ನಿರಂತರ ಶಾಲೆಗೆ ಹಾಜರಾಗಲೇ ಬೇಕು.**




ಎಲ್ಲಾ ಸರ್ಕಾರಿ ಮತ್ತು ಖಾಸಗಿ
ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ
**"ಮಕ್ಕಳ ಹಕ್ಕುಗಳ ಕ್ಲಬ್"**ನ ರಚನೆ.

## "ಶಾಲೆಗೊಂದು ಮಕ್ಕಳ ಹಕ್ಕುಗಳ ಕ್ಲಬ್"

### ಗುರಿ

**"ಪ್ರತಿ ಶಾಲೆಯಲ್ಲಿ 100% ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯನ್ನು ಖಾತ್ರಿಪಡಿಸಿ ಶಾಲೆ ಮತ್ತು ಸಮುದಾಯವನ್ನು 'ಮಕ್ಕಳ ಸ್ನೇಹಿ'ಯನ್ನಾಗಿ ಪರಿವರ್ತಿಸಿ, ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಿ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಕಾರ್ಯನಿರ್ವಹಿಸುವುದು"**

ಸಂವಿಧಾನ ಅಧ್ಯಾಯ 4 ಲೇಖನ 21 ಎ ಪ್ರಕಾರ 6 – 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಶಿಕ್ಷಣ "ಮೂಲಭೂತ ಹಕ್ಕು". (2002 ಸಂವಿಧಾನದ 93 ನೇ ಮಸೂದೆ, 86 ನೇ ತಿದ್ದುಪಡಿ)

## ಉದ್ದೇಶಗಳು

1. ಸಂವಿಧಾನದ ಪ್ರಕಾರ ಮತ್ತು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ ಮಕ್ಕಳು ಎಲ್ಲಾ ಹಕ್ಕುಗಳ ಬಗ್ಗೆ ತಿಳಿಯುವುದು ಹಾಗೂ ತಮ್ಮ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು.
2. ಮಕ್ಕಳ ಹಕ್ಕುಗಳ ಬಗ್ಗೆ ಆಯಾ ಶಾಲೆಯಲ್ಲಿ ಮತ್ತು ಶಾಲಾ ವ್ಯಾಪ್ತಿಯಲ್ಲಿರುವ ಸಮುದಾಯಕ್ಕೆ ಜಾಗೃತಿ ಮೂಡಿಸುವುದು.
3. ಪ್ರತಿ ಶಾಲೆಯಲ್ಲಿ ಎಲ್ಲಾ ಶಾಲಾ ಚಟುವಟಿಕೆಗಳನ್ನು ಮಕ್ಕಳ ಹಕ್ಕುಗಳ ಆಧಾರಿತವಾಗಿ ಕಾರ್ಯಕ್ರಮಗಳನ್ನು ರೂಪಿಸುವುದು.
4. ಶಾಲಾ ಚಟುವಟಿಕೆಗಳು **"ಮಕ್ಕಳ ಹಕ್ಕುಗಳ ಕ್ಲಬ್"** ಮುಖಾಂತರ ತೀರ್ಮಾನ ಕೈಗೊಂಡು ಕಾರ್ಯಕ್ರಮಗಳನ್ನು ರೂಪಿಸುವುದು.
5. ಮಕ್ಕಳು ಶಾಲೆ ಬಿಡುವುದನ್ನು (10ನೇ ತರಗತಿ ತನಕ) ಸಂಪೂರ್ಣ ತಡೆಗಟ್ಟುವುದು.
6. ಬಾಲಕಾರ್ಮಿಕ ಪದ್ಧತಿ ಹಾಗೂ ಬಾಲ್ಯ ವಿವಾಹವನ್ನು ಸಂಪೂರ್ಣ ವಿರೋಧಿಸಿ, ಖಂಡಿಸಿ ಅದರ ನಿರ್ಮೂಲನೆಗೆ ಕಾರ್ಯಕ್ರಮ ರೂಪಿಸುವುದು.
7. ಎಲ್ಲಾ ಮಕ್ಕಳ (0–18 ವರ್ಷ) ಸರ್ವತೋಮುಖ ಅಭಿವೃದ್ಧಿ, ಶಿಕ್ಷಣ ಮತ್ತು ಬಾಲ್ಯವನ್ನು ಕಾಪಾಡಿ ಉತ್ತಮ ನಾಗರಿಕರನ್ನಾಗಿ ರೂಪಿಸುವುದು.
8. ಸಮುದಾಯ, ಎಸ್. ಡಿ. ಎಂ. ಸಿ., ಗ್ರಾಮ ಪಂಚಾಯತ್, ಪೋಷಕರು, ಶಾಲೆ ಮತ್ತು ಮಕ್ಕಳು ಎಲ್ಲಾ ಒಟ್ಟಾಗಿ ಒಂದೇ ವೇದಿಕೆಯಿಂದ ಮಕ್ಕಳು ಮತ್ತು ಶಾಲೆಯ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವುದು.



## ಮಕ್ಕಳ ಹಕ್ಕುಗಳ ಕ್ಲಬ್‌ನ ಕಾರ್ಯ ಚಟುವಟಿಕೆ

1. ಮಕ್ಕಳ ಹಕ್ಕುಗಳ ಬಗ್ಗೆ ಅರಿವಿನ ಕಾರ್ಯಕ್ರಮಗಳನ್ನು ಶಾಲಾ ಮಟ್ಟದಲ್ಲಿ ಮತ್ತು ಸಮುದಾಯ ಮಟ್ಟದಲ್ಲಿ ನಡೆಸುವುದು (ಚಲನಚಿತ್ರ, ಸಂಗೀತ ಸ್ಪರ್ಧೆಗಳು, ಸಾರ್ವಜನಿಕ ಸಭೆ, ಬೀದಿ ನಾಟಕ, ಮಕ್ಕಳ ಸಭೆ ಇತ್ಯಾದಿ) ಹಾಗೂ ನಿರಂತರವಾಗಿ ಈ ಕಾರ್ಯಕ್ರಮಗಳನ್ನು ಮುಂದುವರಿಸುವುದು.
2. ಪ್ರತಿ ತಿಂಗಳು "ಕ್ಲಬ್"ನ ಮಾಸಿಕ ಸಭೆ. ಈ ಸಭೆಯಲ್ಲಿ ಎಲ್ಲಾ ಶಾಲಾ ಚಟುವಟಿಕೆಗಳ ಬಗ್ಗೆ ಚರ್ಚಿಸಿ, ಮಕ್ಕಳ ಅಭಿಪ್ರಾಯ ಪಡೆದು ತೀರ್ಮಾನಿಸುವುದು.
3. ಎಲ್ಲಾ ಮಕ್ಕಳ, ಶಾಲೆಯ ಸಮಸ್ಯೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಈ ಕ್ಲಬ್ ಮುಖಾಂತರ ಚರ್ಚಿಸಿ, ತೀರ್ಮಾನ ಕೈಗೊಂಡು ಕಾರ್ಯಗತಗೊಳಿಸುವುದು.
4. ಪ್ರತಿ ತಿಂಗಳು ಮಕ್ಕಳ ಹಕ್ಕುಗಳ ಕುರಿತಾಗಿ ಸಾಂಸ್ಕೃತಿಕ ಕಾರ್ಯಕ್ರಮ ಅಥವಾ ಇತರ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದು.
5. ಮಕ್ಕಳ ಹಕ್ಕುಗಳ ಕುರಿತಾಗಿ, ಮಕ್ಕಳ ಹಾಗೂ ಶಾಲಾ ಸಮಸ್ಯೆಗಳ ಬಗ್ಗೆ ಮಕ್ಕಳಿಂದ ಗೋಡೆ ಬರಹ, ಭಿತ್ತಿಪತ್ರಗಳನ್ನು ತಯಾರಿಸಿ ಶಾಲಾ ವಾತಾವರಣದಲ್ಲಿ, ಕಟ್ಟಡಗಳಲ್ಲಿ, ಗ್ರಾಮ ಪಂಚಾಯಿತಿ ಹಾಗೂ ಸಮುದಾಯಗಳಲ್ಲಿ ಅವುಗಳನ್ನು ಬಳಸುವುದು.
6. ಎಲ್ಲಾ ಶಾಲೆ ಮತ್ತು ಸಮುದಾಯದಲ್ಲಿ ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮ, ರಾಷ್ಟ್ರೀಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಹಬ್ಬಗಳನ್ನು ಈ ಕ್ಲಬ್‌ನ ಮುಖಾಂತರ ಚರ್ಚಿಸಿ, ತೀರ್ಮಾನ ಕೈಗೊಂಡು ಕ್ಲಬ್‌ನ ನೇತೃತ್ವದಲ್ಲಿ ಆಚರಿಸುವುದು.
7. ಶಾಲಾ ವಾತಾವರಣ ಹಾಗೂ ಸಮುದಾಯವನ್ನು **"ಬಾಲ ಕಾರ್ಮಿಕ ಮುಕ್ತ"** ವನ್ನಾಗಿ ಮಾಡುವುದು.
8. ಯಾವುದೇ ಮಗು 10ನೇ ತರಗತಿ ತನಕ ಶಾಲೆ ಬಿಡದಂತೆ ನೋಡಿಕೊಳ್ಳುವುದು.
9. ಮಕ್ಕಳ ಹಕ್ಕು ಮತ್ತು ಹಿತವನ್ನು ಎಲ್ಲಾ ದೃಷ್ಟಿಯಿಂದ ಕಾಪಾಡುವುದು.
10. ಸಂಪೂರ್ಣ ಹಾಜರಾತಿ ಶಾಲೆಯನ್ನಾಗಿ ಮಾಡುವುದು. ಅದಕ್ಕೆ ಪೂರಕವಾದ ಎಲ್ಲಾ ಚಟುವಟಿಕೆಯನ್ನು ಕ್ಲಬ್ ಮುಖಾಂತರ ಶಾಲೆಯಲ್ಲಿ ಹಮ್ಮಿಕೊಳ್ಳುವುದು.
11. ಪ್ರತಿ ತಿಂಗಳಿಗೊಮ್ಮೆ ಎಸ್.ಡಿ.ಎಂ.ಸಿ. ಸಭೆ ಆಗುವಂತೆ ನೋಡುವುದು.
12. ತಮ್ಮ ಶಾಲಾ ವ್ಯಾಪ್ತಿಯಲ್ಲಿ ಬಾಲಕಾರ್ಮಿಕತೆ, ಬಾಲ್ಯ ವಿವಾಹ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ಪ್ರಕರಣ ಕಂಡಾಗ ಕ್ಲಬ್‌ನ ವತಿಯಿಂದ ಸಂಬಂಧಿಸಿದ ಇಲಾಖೆಗಳಿಗೆ ದೂರು ನೀಡುವುದು.
13. ತಮ್ಮ ಶಾಲಾ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿ, ಗ್ರಾಮ ಪಂಚಾಯತ್, ಪೊಲೀಸ್ ಠಾಣೆ, ಮಹಿಳಾ ಸಂಘ, ಸ್ವ-ಸಹಾಯ ಸಂಘ, ಯುವಕ ಸಂಘಗಳಿಗೆ ಭೇಟಿ ನೀಡಿ ಮಾಹಿತಿ ಪಡೆದು ಶಾಲಾ ಅಭಿವೃದ್ಧಿಗೆ ಸಹಭಾಗಿತ್ವ ಪಡೆಯುವುದು.

